## ಅಮೋಘ ಡ್ರಾಮಾ ಜ್ಯೂನಿಯರ್ಸ್

ಡ್ರಾಮಾ ಜ್ಯೂನಿಯರ್ಸ್ ಮಹಾ ಸಂಚಿಕೆ (2.12.17)ಯಲ್ಲಿ ಕಣ್ಣಿನ ತೊಂದರೆಯಿಂದ ಬಳಲುವ ಪಾತ್ರದಲ್ಲಿ ಆರಾಧ್ಯಳ ಅಭಿನಯ ಅಮೋಘವಾಗಿ ಮೂಡಿಬಂತು. ಈಕೆಯ ತಂದೆಯಾಗಿ ಶಿವರಾಜರ ಪಾತ್ರ ಹೃದಯಸ್ಪರ್ಶಿಯಾಗಿತ್ತು. ಕಣ್ಣಿನ ಡಾಕ್ಟರಾಗಿ ಶ್ರಾವ್ಯ ಮಿಂಚಿ ಮರೆಯಾದಳು. ಡುಬಾಕ ಟಿ.ವಿ. ಸಂದರ್ಶನದಲ್ಲಿ ಗೋವಿಂದೇಗೌಡರು ಮಂತ್ರಿಯ ಪ್ರತಿರೂಪದಂತಿದ್ದರು. ಮಾತಿನ ಏರಿಳಿತ, ಪಂಚೆ ಡ್ಯಾನ್ಸ್‌ಗೆ ಅವರೇ ಸಾಟಿ. ಪುಟಾಣಿಗಳೊಂದಿಗೆ ಪುಟಾಣಿ ಸಂಜು ಬಸವಯ್ಯ ಭಾಗವಹಿಸಲಿಲ್ಲ. ಹೊಸ ಸೇರ್ಪಡೆ ಮುಖ್ಯಮಂತ್ರಿ ಚಂದ್ರು ಅವರ ಹಾಸ್ಯ ಒಗ್ಗರಣೆ ಕಚಗುಳಿ ಇಡುವಂತಿರುತ್ತದೆ.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಏನು ಪ್ರಯೋಜನ?

'ಕಲರ್ ಸೂಪರ್'ನಲ್ಲಿ ಬರುತ್ತಿರುವ 'ಬಿಗ್ ಬಾಸ್' ಕಾರ್ಯಕ್ರಮದಿಂದ ಪ್ರೇಕ್ಷಕರಿಗೆ ನೀಡುತ್ತಿರುವ ಸಂದೇಶವೇನು? ಹೇಳುವ ನೀತಿ ಪಾಠವೇನು? ಒಳಗಿರುವವರ ಹುಚ್ಚಾಟಗಳು, ಪರಸ್ಪರ ಕಿತ್ತಾಟ, ಜಗಳಗಳು, ಅತಿರೇಕದ, ಅಸಹ್ಯ ಎನಿಸುವ ಟಾಸ್ಕ್‌ಗಳಿಂದ ಪ್ರೇಕ್ಷಕರಿಗೆ ಜಿಗುಪ್ಸೆ ಹುಟ್ಟುವುದಲ್ಲದೆ ಬೇರೆ ಯಾವುದೇ ಪ್ರಯೋಜನವಿಲ್ಲ.

—ಗುರುರಾವ್ ನಾಡಿಗೇರ, ಶಿವಮೊಗ್ಗ

ವಾರದ ಪತ್ರ

## ಇಂಗ್ಲಿಷ್ ಸುಳಿವು ಬೇಡ

ದೂರದರ್ಶನದಲ್ಲಿ ಪ್ರಸಾರವಾಗುತ್ತಿರುವ ಅತ್ಯಂತ ಜನಪ್ರಿಯ ಕಾರ್ಯಕ್ರಮ 'ಥಟ್ ಅಂತ ಹೇಳಿ'. ಈ ಕಾರ್ಯಕ್ರಮದಲ್ಲಿ ಕುವೆಂಪು, ಕಾರಂತ, ದ.ರಾ. ಬೇಂದ್ರೆಯಂತಹವರನ್ನೂ ಗುರುತಿಸಲಾಗದಂತಹ, ಕನ್ನಡ ರಾಜ್ಯೋತ್ಸವ, ಕರ್ನಾಟಕ ಏಕೀಕರಣ ಈ ರೀತಿಯ ಪದಗಳನ್ನೇ ಕೇಳಿರದ (ಮಕ್ಕಳನ್ನು) ವಿದ್ಯಾರ್ಥಿಗಳನ್ನು ನೋಡಿದಾಗ ಸಂಕಟವಾಗುತ್ತದೆ. ಡಾ. ನಾ.ಸೋಮೇಶ್ವರ ಅವರು ನೀಡುವ ಸುಳುಹುಗಳನ್ನು ಕೂಡಾ ಅರ್ಥ ಮಾಡಿಕೊಳ್ಳಲು ಆಗದ ವಿದ್ಯಾರ್ಥಿಗಳಿದ್ದಾರೆ.

ಆಂಗ್ಲ ಶಾಲೆಯಿಂದ ಬರುವ ಮಕ್ಕಳಿಗೆ ಕನ್ನಡ ಅರ್ಥವಾಗದಿದ್ದಾಗ ಅದಕ್ಕೆ ಸರಿಸಮನಾದ ಆಂಗ್ಲ ಪದ ಹೇಳುವುದು, ಮಕ್ಕಳಿಂದ ಸರಿ ಉತ್ತರಕ್ಕಾಗಿ ಉದಾಹರಣೆಗಳನ್ನು ನೀಡುವುದು ಅಥವಾ ಸುಳುಹು ನೀಡುವುದು ಮುಂತಾದುವು ಖಂಡಿತಾ ಬೇಡ.

–ಶಾಂತಾ ನಾಗರಾಜ್ ಕೆ. ಬೆಂಗಳೂರು

## ವೃತ್ತಿ ದ್ವೇಷಕ್ಕೆ ಮಿತಿ ಇರಲಿ

ಒಂದು ಸುದ್ದಿ ವಾಹಿನಿಯ ವರದಿಗಾರರ ಮೇಲೆ, ಒಂದು ರಾಜಕೀಯ ಪಕ್ಷದ ಕೆಲವು ಮುಖಂಡರು ಹಲ್ಲೆ ಮಾಡಿದ್ದನ್ನು ಸಂಬಂಧಪಟ್ಟ ಸುದ್ದಿ ವಾಹಿನಿಯು ವಿಸ್ತೃತವಾಗಿ ವರದಿ ಮಾಡಿತು. ಈ ಘಟನೆಯನ್ನು ಮಾಧ್ಯಮ ಮತ್ತು ಪ್ರಜ್ಞಾವಂತರು ತೀವ್ರವಾಗಿ ಖಂಡಿಸಿದರು. ಆದರೆ, ಹಲವು ಸುದ್ದಿ ವಾಹಿನಿಗಳು ಇದನ್ನು ಪ್ರಸಾರ ಮಾಡಲಿಲ್ಲ ಅಥವಾ ನೆಪಮಾತ್ರಕ್ಕೆ ಒಂದೆರಡು ನಿಮಿಷದಲ್ಲಿ ಅಥವಾ ಮಾತುಗಳಲ್ಲಿ ಉಲ್ಲೇಖಿಸಿದವು. ಈ ರೀತಿ ಪ್ರತಿಕ್ರಿಯೆ ವೃತ್ತಿ ದ್ವೇಷದ ಪರಿಣಾಮವೋ ಅಥವಾ ಸ್ಪರ್ಧೆಯ ಕರಾಳ ಛಾಯೆಯೋ ತಿಳಿಯದು. ಕೆಲವು ವಾಹಿನಿಗಳು ಸಂಬಂಧಪಟ್ಟ ಸುದ್ದಿ ವಾಹಿನಿಗಳನ್ನು ಹೆಸರಿಸಲೂ ಹಿಂದೇಟು ಹಾಕಿದವು. ಇಂದು ಒಂದು ವಾಹಿನಿಯ ವರದಿಗಾರರ ಮೇಲೆ ಹಲ್ಲೆ ಮಾಡಿದವರು, ನಾಳೆ ಇನ್ನೊಂದು ವಾಹಿನಿ ವರದಿಗಾರರ ಮೇಲೆ ಹಲ್ಲೆ ನಡೆಸಬಹುದು. ಸ್ಪರ್ಧೆ, ವೈಷಮ್ಯ ಬೇರೆ ಮತ್ತು ವೃತ್ತಿ ಸಂಹಿತೆ, ಒಗ್ಗಟ್ಟು ಬೇರೆ.

—ರಮಾನಂದ ಶರ್ಮಾ, ಬೆಂಗಳೂರು

## 'ಫ್ಯಾಮಿಲಿ ಪವರ್' ಯಶಸ್ವಿಯಾಗಲಿ

ಕಲರ್ಸ್ ಕನ್ನಡ ವಾಹಿನಿ ಪ್ರಸಾರ ಮಾಡುತ್ತಿರುವ ಧಾರಾವಾಹಿಗಳಿಂದ ಬೇಸತ್ತಿದ್ದ ವೀಕ್ಷಕರಿಗೆ ಕನಿಷ್ಠ ಶನಿವಾರ ಹಾಗೂ ರವಿವಾರವಾದರೂ ಸ್ವಲ್ಪ ರಿಲೀಫ್ ಸಿಕ್ಕಂತಾಗಿದೆ. ನವೆಂಬರ್ 25 ರಿಂದ ಆರಂಭಗೊಂಡಿರುವ 'ಫ್ಯಾಮಿಲಿ ಪವರ್' ರಿಯಾಲಿಟಿ ಶೋ ಸ್ವಲ್ಪ ಮಟ್ಟಿಗಾದರೂ ಮನೋರಂಜನೆ ನೀಡುವಂತೆ ತೋರುತ್ತಿದೆ. ಇಂತಹ ರಿಯಾಲಿಟಿ ಶೋಗಳಲ್ಲಿ ಭಾಗವಹಿಸಲು ಬರುವ ಮಹಿಳೆಯರು ಅವರು ಗೃಹಿಣಿಯರೇ ಆಗಿರಬಹುದು ಶೋ ನಡೆಸಿಕೊಡುವ ನಟರೊಂದಿಗೆ ಡಾನ್ಸ್ ಮಾಡಲು ಇಚ್ಛಿಸುವುದು ಇಂದಿನ ಒಂದು ಟ್ರೆಂಡ್ ಆಗಿದೆ. ಅದು ಒಂದು ಮಿತಿಯಲ್ಲಿದ್ದರೆ ಪರವಾಗಿಲ್ಲ. ಆದರೆ ಅದೇ ಒಂದು ಗೀಳಾಗಿ ಬಿಟ್ಟರೆ ಶೋದ ಸ್ವಾರಸ್ಯವೇ ಹೊರಟು ಹೋಗುತ್ತದೆ. ಇಂಥದ್ದಕ್ಕೆಲ್ಲ ಹೆಚ್ಚು ಅವಕಾಶ ನೀಡದೆ ಕಾರ್ಯಕ್ರಮದ ಗಾಂಭೀರ್ಯವನ್ನು ಕಾಪಾಡಬೇಕಾದ ಅವಶ್ಯಕತೆ ಇದೆ.

—ಮುರಲೀಧರ ಕುಲಕರ್ಣಿ, ಬೀದರ್

## ಸಾಧಕರ ಪರಿಚಯ

ಈಚೆಗೆ ನ್ಯೂಸ್ ಚಾನೆಲ್‌ಗಳನ್ನು ನೋಡಿದರೆ ಮನಸ್ಸಿನಲ್ಲಿ ಒಂದು ರೀತಿಯ ಆತಂಕ, ಜಿಗುಪ್ಸೆ ಮೂಡುತ್ತದೆ. ಸಣ್ಣ ಸುದ್ದಿಗಳನ್ನು ದಿನವಿಡೀ ವೈಭವೀಕರಿಸುವುದರ ಜೊತೆಗೆ, ರಾಜಕೀಯ ಹಾಗೂ ಕ್ರೈಂ ಕಾರ್ಯಕ್ರಮಗಳಿಂದ ಟಿ.ಆರ್.ಪಿ. ಏರಿಸಿಕೊಳ್ಳುವಲ್ಲಿ ಚಾನೆಲ್‌ಗಳು ಪೈಪೋಟಿಗೆ ಇಳಿದಿವೆ.

ಆದರೆ 'ದಿಗ್ವಿಜಯ' ಚಾನೆಲ್ ರೋಚಕ ವಿಷಯಗಳನ್ನು ಹೇಳುವ ಜೊತೆಗೆ ಹಲವು ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ. ಉದಾಹರಣೆಗೆ 'ವಾವ್ ಕರ್ನಾಟಕ' ಕಾರ್ಯಕ್ರಮದಲ್ಲಿ ಹಲವು ಸಾಧಕರ ಪರಿಚಯ ಮಾಡುತ್ತಿದೆ. 'ಸೇತುವೆ ಸರದಾರ' ಎಂದೇ ಖ್ಯಾತಿ ಪಡೆದ ಗಿರೀಶ ಭಾರದ್ವಾಜರ ಕುರಿತ ಕಾರ್ಯಕ್ರಮ ಹಲವರಿಗೆ ಸಾಧನೆಯ ಹಾದಿಯಲ್ಲಿ ಹೆಜ್ಜೆ ಹಾಕಲು ಪ್ರೇರಣೆ ನೀಡಿರಬಹುದು.

—ಚಂದ್ರಿಕಾ ಜೆ., ಬೆಂಗಳೂರು

## ಕಥೆ ಮುಗಿಸಿ

ಮನೆದೇವರು ಧಾರಾವಾಹಿಯಲ್ಲಿ ಮನೆಯವರನ್ನೆಲ್ಲ ಪರಿವರ್ತನೆ ಮಾಡಿ ಎಲ್ಲರೂ ಒಂದಾಗಿ ಬಾಳುವಂತೆ ಮಾಡಬೇಕೆಂದು ಸೊಸೆ ಜಾನಕಿಯ ಹತ್ತಿರ ಭಾಷೆ ತೆಗೆದುಕೊಂಡು ಸಾಯುತ್ತಾಳೆ ರೋಹಿಣಿ. ಜಾನಕಿ ಬೇರೆಯವರ ಅಪರಾಧಗಳನ್ನೆಲ್ಲ ಮುಚ್ಚಿಟ್ಟು ಕೊನೆಗೆ ತಾನೇ ಬಲಿಪಶುವಾಗುತ್ತಾಳೆ. ಅನು, ಅಭಿರಾಮನ ಸಾವಿನೊಂದಿಗೆ ರೋಹಿಣಿಯ ಆಸೆಯೂ ಕಮರಿ ಧಾರಾವಾಹಿಯ ಮೂಲ ಉದ್ದೇಶವೇ ಹಾಳಾಯಿತು. ಇನ್ನು ಈ ಧಾರಾವಾಹಿಯನ್ನು ಮುಂದುವರಿಸುವುದರಲ್ಲಿ ಅರ್ಥವೇ ಇಲ್ಲ

—ಪ್ರಭಾವತಿ ಕಾಳಪ್ಪ, ಹೊಳೆನರಸೀಪುರ

## ಸೊಗಸು ಇನ್ನಷ್ಟು ಹೆಚ್ಚಲಿ

ಕಲರ್ಸ್ ಕನ್ನಡ ಕುಟುಂಬಕ್ಕೆ ಹೊಸದಾಗಿ ಸೇರ್ಪಡೆಗೊಂಡಿರುವ 'ಫ್ಯಾಮಿಲಿ ಪವರ್' ಕೌಟುಂಬಿಕ ರಿಯಾಲಿಟಿ ಶೋ ಅದ್ಭುತವಾಗಿದೆ. ಪುನೀತ್ ರಾಜಕುಮಾರ್ ಅವರ ನಿರೂಪಣಾ ಶೈಲಿ, ಹಾವಭಾವ, ಸ್ಪರ್ಧಿಗಳೊಂದಿಗೆ ಅವರು ಬೆರೆಯುವ ರೀತಿ ನೋಡುಗರಿಗೆ ರಸದೌತಣ ನೀಡುತ್ತದೆ. ಹಾಗೆಯೇ ಸ್ಪರ್ಧೆಯಲ್ಲಿ ಭಾಗವಹಿಸುವ ಕುಟುಂಬಗಳು ತಮ್ಮ ಕುಟುಂಬವನ್ನು ಎಷ್ಟು ಅರಿತಿದ್ದಾರೆ, ಕುಟುಂಬ ಸದಸ್ಯರನ್ನು ನಾವು ಎಷ್ಟರ ಮಟ್ಟಿಗೆ ಅರಿತಿದ್ದೇವೆ ಎಂಬುದು ಇಲ್ಲಿ ತಿಳಿಯುತ್ತದೆ. ಹತ್ತು ಲಕ್ಷ ರೂಗಳನ್ನು ಗೆಲ್ಲಲೇ ಬೇಕೆಂಬ ಹುಮ್ಮಸ್ಸಿನಿಂದ ಕುಟುಂಬದ ಸದಸ್ಯರು ನೀಡುವ ಪೈಪೋಟಿ ಹಾಗೂ ಸ್ಪರ್ಧೆಯಲ್ಲಿನ ಆಟಗಳು, ಹಂತಗಳು, ನಿಯಮಗಳು, ಸ್ಪರ್ಧಿಗಳು ಆಟದಲ್ಲಿ ಭಾಗವಹಿಸುವಿಕೆ ತುಂಬಾ ಸೊಗಸಾಗಿ ಮೂಡಿಬರುತ್ತಿದೆ. ಅವಿಭಕ್ತ ಕುಟುಂಬದ ಮಹತ್ವವನ್ನು ಸಾರುವ ಈ ಶೋ ವಾರಂತ್ಯದಲ್ಲಿ ಮನೆ ಮಂದಿ ಎಲ್ಲರೂ ಕೂತು ವೀಕ್ಷಿಸಬಹುದಾದ ಕಾರ್ಯಕ್ರಮ.

—ಪ್ರಶಾಂತ ಶಂಕ್ರಪ್ಪ ಮೇಟಿ, ನರಗುಂದ